Gulbarga

32 M R Medical College, Gulbarga

33 Khaja Badanawaz Institute of Medical Science, Gulbarga

Bellary District

34 Vijayanagara Institute of Medical Science, Bellary

Bagalkote

35 S Nijalingappa Medical College, Bagalkot

Raichur

36 Navodaya Medical College, Raichur

ವಿಷಯ ಆಶ್ರಮ ಶಾಲೆಗಳು ಅವನತಿ ಅಂಚಿನಲ್ಲಿ

158(377) ಶ್ರೀ ಬಸವರಾಜು ಎ ಎಸ್

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಅಲೆಮಾರಿ ಜನಾಂಗದವರಿಗಾಗಿ ಪ್ರತ್ಯೇಕವಾಗಿ 1962-63 ನೇ ಸಾಲಿನಿಂದ ಈ ಕೆಳಕಂಡ ಶೈಕ್ಷಣಿಕ ಸೌಲಭ್ಯದ ನೀಡುತ್ತಿರುವುದು ನಿಜವೇ?

1) ಆಶ್ರಮ ಶಾಲೆಗಳು ಒಟ್ಟು 78 ಇದರಲ್ಲಿ ರದ್ದಾದ ಹುದೆಗಳು

61

2) ಮಹಿಳಾಕಲ್ಯಾಣ ಕೇಂದ್ರಗಳು ಒಟ್ಟು 48 ಇದರಲ್ಲಿ ರದ್ದಾದ ಹುದ್ದೆಗಳು 45

3) ಭೋಧನ ಕೇಂದ್ರದ ಹುದ್ದೆಗಳು ಒಟ್ಟು 25 ಇದರಲ್ಲಿ ರದ್ದಾದ ಹುದ್ದೆಗಳು 19

4) ಹೊಲಿಗೆ ತರಬೇತಿ ಕೇಂದ್ರಗಳು ಒಟ್ಟು– ಇದರಲ್ಲಿ ರದ್ದಾದ ಹುದ್ದೆಗಳು 28

ಆ) ಹಾಗಿದ್ದಲ್ಲಿ ಸರ್ಕಾರದ ಆದೇಶ ಸಂಖ್ಯೆ ಸ ಕ ಇ 333 ಬಿಇಟಿ 2005 ದಿನಾಂಕ 11 5 2005 ರನ್ವಯ ಶೇ 80 ಎಷ್ಟು ಹುದ್ದೆಗಳನ್ನು ರದ್ದು ಮಾಡಲಾಗಿದ್ದರಿಂದ ಆಶ್ರಮ ಶಾಲೆ ಹಾಗೂ ಇತರೆ ಕೇಂದ್ರದ ಕಾರ್ಯಕ್ರಮಗಳು ಅವನತಿ ಅಂಚಿನಲ್ಲಿರುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಇ) ಭೋಧನಾ ಕೇಂದ್ರದ 19 ಹುದ್ದೆಗಳನ್ನು ಅಲೆಮಾರಿ ಜನಾಂಗದ ಕೋಶದ ಖಾಲಿ ಹುದ್ದೆಗೆ ಭರ್ತಿ ಮಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಜಾರಕಿಹೊಳಿ

ಅ) ಹೌದು

1) ಆಶ್ರಮ ಶಾಲೆಗಳು ಒಟ್ಟು 74 ಇದರಲ್ಲಿ ರದ್ದಾದ ಶಿಕ್ಷಕರ ಹುದ್ದೆಗಳು 52, ಗ್ರೂಪ್ ಡಿ ಹುದ್ದೆಗಳು –9

2) ಮಹಿಳಾಕಲ್ಯಾಣ ಕೇಂದ್ರಗಳು ಒಟ್ಟು 45 ಇದರಲ್ಲಿ ರದ್ದಾದ ಹುದ್ದೆಗಳು 45

3) ಭೋದನ ಕೇಂದ್ರದ ಹುದ್ದೆಗಳು ಒಟ್ಟು 29 ಇದರಲ್ಲಿ ರದ್ದಾದ ಹುದ್ದೆಗಳು 24

4) ಹೊಲಿಗೆ ತರಬೇತಿ ಕೇಂದ್ರಗಳು ಒಟ್ಟು 48 ಇದರಲ್ಲಿ ರದ್ದಾದ ಗ್ರೂಪ್ ಡಿ ಹುದ್ದೆಗಳು 48

ಆಶ್ರಮ ಶಾಲೆಗೆ ಇರುವ ಮಾದರಿ ಸಿಬ್ಬಂದಿ ಪ್ರಕಾರ ಇದ್ದ ಶಿಕ್ಷಕರ 114 ಹುದ್ದೆಗಳಲ್ಲಿ 52 ಹುದ್ದೆಗಳು ಅಂದರೆ, ಶೇ 45 ರಷ್ಟು ಖಾಲಿ ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ ಸಕಇ 333 ಬಿಇಟಿ 2005 ದಿನಾಂಕ 11 10 2005 ರಲ್ಲಿ ರದ್ದಾಗಿರುತ್ತದೆ

ಮೇಲಿನಂತೆ ಶೀಕ್ಷಕರ ಖಾಲಿ ಹುದ್ದೆಗಳು ರದ್ದಾದ ನಂತರ, ಇನ್ನೂ 62 ಮಂಜೂರಾದ ಶಿಕ್ಷಕರ ಹುದ್ದೆಗಳಿದ್ದು, ಅದರಲ್ಲಿ 39 ಖಾಲಿ ಹುದ್ದೆಗಳಾಗಿರುತ್ತವೆ ಶಿಕ್ಷಕರ 39 ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ

ಆಶ್ರಮ ಶಾಲೆಗಳಿರುವ ಸ್ಥಳಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, ಶಿಕ್ಷಕರಿಲ್ಲದಂತಹ 28 ಆಶ್ರಮ ಶಾಲೆಗಳಲ್ಲಿನ ಮಕ್ಕಳನ್ನು ಸ್ಥಳೀಯ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ವ್ಯಾಸಂಗಕ್ಕಾಗಿ ಕಳುಹಿಸಲಾಗುತ್ತಿದೆ

ಇ) ಸರ್ಕಾರದ ಆದೇಶ ಸಂಖ್ಯೆಳ ಸಕಇ 333 ಬಿಇಟಿ 2005 ದಿನಾಂಕ 11 10 2005 ರಲ್ಲಿ ಈ ಹಿಂದೆ ಇದ್ದ 5 ಭೋಧನಾ ಕೇಂದ್ರಗಳ 19 ಗ್ರೂಪೆಎ–ಸಿ ಹುದ್ದೆಗಳು ರದ್ದಾಗಿದ್ದು (ಕಛೇರಿ ಮೇಲ್ವಿಚಾರಕರು–4, ಪ್ರಥಮ ದರ್ಜೆ ಸಹಾಯಕರು–5, ದ್ವತೀಯ ದರ್ಜೆ ಸಹಾಯಕರು 5 ಬೆರಳಚ್ಚುಗಾರರು–5) ಇನ್ನು ಕೇವಲ 5 ಗ್ರೂಪ್–ಬಿ ಹುದ್ದೆಗಳು ಮಾತ್ರ ಉಳಿದಿರುತ್ತವೆ

ಈಗ ಸರ್ಕಾರದ ಆದೇಶ ಸಂಖ್ಯೆ ಸಕಇ 97 ಬಿಸಿಸೆ 2007, ದಿನಾಂಕ 02 06 2007 ರ ರೀತ್ಯ ನಿರ್ದೇಶನಾಲಯದಲ್ಲಿ ಸೃಜಸಿರುವ ಅಲೆಮಾರಿ ಜನಾಂಗದ ಕೋಶದಲ್ಲಿ ಗ್ರೂಪ್–ಬಿ ಹುದ್ದೆಗಳು ಇಲ್ಲವಾದ್ದರಿಂದ ಬೋಧನಾ ಕೇಂದ್ರಗಳ ಹುದ್ದೆಗಳಿಂದ ಭರ್ತಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ